3. ಸಾಮಾನ್ಯವಾಗಿ ವಿದ್ಯಾರ್ಥನಿಲಯದ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಪೂರ್ಣಗೊಳಿಸಲು ಎರಡು ವರ್ಷಗಳು ಬೇಕಾಗುವುದು. ಆದುದರಿಂದ ಎಲ್ಲಾ ವಿದ್ಯಾರ್ಥಿನಿಲಯಗಳ ಕಾಮಗಾರಿಗಳನ್ನು 1998-99ನೇ ಸಾಲಿನಲ್ಲಿ ಮುಗಿಸಲಾಗುವುದಿಲ್ಲ.

ಚಿಕ್ಕಮಗಳೂರು ನಗರ ಹಾಗೂ ಇತರ ಭಾಗಗಳ ಅತಿವೃಷ್ಟಿ ಪರಿಹಾರ

707 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರ ಹಾಗೂ ಇತರೆ ಭಾಗಗಳಲ್ಲಿ 1997ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಬಂದಂತಹ ಭಾರಿ ಮಳೆಯಿಂದ ಸಾರ್ವಜನಿಕ ಆಸ್ತಿ ಪಾಸ್ತಿ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾನಿಯಾಗಿರುವ ಬಗ್ಗೆ ಅಂದಾಜು ಮಾಡಲಾಗಿದೆಯೇ?

ಇ) ಪರಿಹಾರ ಕಾಮಗಾರಿಗಳಿಗೆ ಸರ್ಕಾರ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ?

ಈ) ಬೇಡಿಕೆಯಂತೆ ಸರ್ಕಾರ ಹಣ ಬಿಡುಗಡೆ ಮಾಡಲು ಒಪ್ಪಿದೆಯೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಹೌದು.

ಆ) ಹೌದು.

ಇ) ಪರಿಹಾರ ಕಾರ್ಯಗಳಿಗಾಗಿ ಸರ್ಕಾರವು ಇಲ್ಲಿಯವರೆಗೆ ರೂ. 75.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಈ) ಲಭ್ಯವಿರುವ ಅನುದಾನ ಮತ್ತು ಋತುಮಾನ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಸರ್ಕಾರವು ಹಣ ಬಿಡುಗಡೆ ಮಾಡುತ್ತದೆ.

ಚಿಕ್ಕಮಗಳೂರು ನಗರಸಭೆಗೆ ವಿಶೇಷ ಅನುದಾನ ಬಿಡುಗಡೆ

708 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಸಭೆಗೆ ವಿಶೇಷ ಅನುದಾನ ಬಿಡುಗಡೆ ಮಾಡಲು ನಗರಸಭೆ ವತಿಯಿಂದ ಸರ್ಕಾರಕ್ಕೆ ಕೋರಿಕೆ ಬಂದಿದೆಯೇ? (ರಾಜ್ಯದಲ್ಲಿ ಬೇರೆ ಬೇರೆ ನಗರಸಭೆ ಹಾಗೂ ಪುರಸಭೆಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡುವುದು)

ಅ) ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಿದ್ದಲ್ಲಿ ಚಿಕ್ಕಮಗಳೂರು ನಗರಸಭೆಗೆ ವಿಶೇಷ ಅನುದಾನ ಬಿಡುಗಡೆ ಮಾಡಲು ವಿಳಂಬವಾಗಲು ಕಾರಣಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಪಟ್ಟಿ ಲಗತ್ತಿಸಿದೆ.

ಇ) 1997-98ನೇ ಸಾಲಿನಲ್ಲಿ ರಾಜ್ಯದ ಹಣಕಾಸು ಆಯೋಗದ ಅಡಿಯಲ್ಲಿ ಬಿಡುಗಡೆ ಮಾಡಿದ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೌಕರರ ವೇತನಕ್ಕಾಗಿ ಹಾಗೂ ಸ್ಥಳೀಯ ಸಂಸ್ಥೆಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ನೀಡಬೇಕಾದ ಬಾಕಿ ಮೊತ್ತವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡಬೇಕಾದ ಸಾಲದ ಮೊತ್ತವನ್ನು ಬಿಡುಗಡೆ ಮಾಡಿದ್ದು ಉಳಿದ ಮೊತ್ತವನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಸಮನಾಗಿ ಹಂಚಿರುವುದರಿಂದ ವಿಳಂಬವಾಗಲು ಅವಕಾಶವಿರುವುದಿಲ್ಲ.

ನಗರಸಭೆ ಹಾಗೂ ಪುರಸಭೆಗಳಿಗೆ ಬಿಡುಗಡೆ ಮಾಡಿದ ಮೊತ್ತದ ವಿವರ

1	2	3
1.	ಶ್ರೀನಿವಾಸಪುರ ಪಟ್ಟಣ ಪಂಚಾಯ್ತಿ	14.00 ಲಕ್ಷ
2.	ಕನಕಪುರ ಪುರಸಭೆ	5-00 ಲಕ್ಷ
3.	ಮಡಿಕೇರಿ ಪುರಸಭೆ	4-00 ಲಕ್ಷ
4.	ವಿರಾಜಪೇಟೆ ಪಟ್ಟಣಪಂಚಾಯತಿ	3-00 ಲಕ್ಷ
5.	ಸೋಮವಾರಪೇಟೆ ಪಟ್ಟಣಪಂಚಾಯತಿ	3-00 ಲಕ್ಷ
6.	ಗುರುಮಿಟ್ಕಲ್ ಪುರಸಭೆ	4-00 ಲಕ್ಷ
7.	ಕಾರ್ಕಳ ಪುರಸಭೆ	5-00 ಲಕ್ಷ
8.	ಶಿಕಾರಿಪುರ ಪುರಸಭೆ	4-00 ಲಕ್ಷ
9.	ಚಾಮರಾಜನಗರ ನಗರಸಭೆ	4-00 ಲಕ್ಷ
10.	ಕಲಘಟಗಿ ಪುರಸಭೆ	4-00 ಲಕ್ಷ
11.	ಅಥಣಿ ಪುರಸಭೆ	4-00 ಲಕ್ಷ

1	2	3
12.	ಚಿಟಗುಪ್ಪ ಪುರಸಭೆ	5-00 ಲಕ್ಷ
13.	ಸೇಡಂ ಪುರಸಭೆ	4-00 ಲಕ್ಷ
14.	ಹಾವೇರಿ ಪುರಸಭೆ	4-00 ಲಕ್ಷ
15.	ಸೊರಬ ಪಟ್ಟಣಪಂಚಾಯತಿ	3-00 ಲಕ್ಷ
16.	ಆಳಂದ ಪುರಸಭೆ	4-00 ಲಕ್ಷ
17.	ಹಾನಗಲ್ ಪುರಸಭೆ	4-00 ಲಕ್ಷ
18.	ಸಾಗರ ಪುರಸಭೆ	4-00 ಲಕ್ಷ
19.	ಶಿಗ್ಗಾಂವ ಪುರಸಭೆ	3-00 ಲಕ್ಷ
20.	ಬೈಲಹೊಂಗಲ ಪುರಸಭೆ	4-00 ಲಕ್ಷ
21.	ಮುಂಡರಗಿ ಪಟ್ಟಣಪಂಚಾಯ್ತಿ	4-00 ಲಕ್ಷ
22.	ಮುಳಗುಂದ ಪಟ್ಟಣಪಂಚಾಯ್ತಿ	4-00 ಲಕ್ಷ
23.	ಶಹಾಪುರ ಪುರಸಭೆ	4-00 ಲಕ್ಷ
24.	ಕುಷ್ಟಗಿ ಪಟ್ಟಣಪಂಚಾಯ್ತಿ	4-00 ಲಕ್ಷ
25.	ಮುದಗಲ್ ಪಟ್ಟಣಪಂಚಾಯ್ತಿ	4-00 ಲಕ್ಷ
26.	ಹೊಸಕೋಟೆ ಪುರಸಭೆ	20-00 ಲಕ್ಷ
27.	ಪಿರಿಯಾಪಟ್ಟಣ ಪಟ್ಟಣಪಂಚಾಯ್ತಿ	10-00 ಲಕ್ಷ
28.	ಚನ್ನಗಿರಿ ಪಟ್ಟಣಪಂಚಾಯ್ತಿ	20-00 ಲಕ್ಷ
29.	ದಾವಣಗೆರೆ ನಗರಸಭೆ	20-00 ಲಕ್ಷ
30.	ಚಿತ್ರದುರ್ಗ ನಗರಸಭೆ	10-00 ಲಕ್ಷ

ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಟ್ಟಿರುವ ಮನೆಗಳನ್ನು ಸಕ್ರಮಗೊಳಿಸಲು ಅವಧಿ ವಿಸ್ತರಣೆ

709 - ಶ್ರೀ ಸಿ.ಆರ್. ಸಗೀರ್ ಅಹಮದ್(ಚಿಕ್ಕಮಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ವಿವಿಧ ನಗರ ಸಭೆ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿಯೇ?